# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 33 /2023

P.W : 3

C.W: 3

**ದಿನಾಂಕ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| **ಹೆಸರು** | : | ರಿಯಾಜ್ ಖಾನ್ |
| **ತಂದೆಯ ಹೆಸರು** | : | ಲೇಟ್ ದಸ್ತಗೀರ್ ಖಾನ್ |
| **ವಯಸ್ಸು** | : | 37 ವರ್ಷ |
| **ವೃತ್ತಿ** | : | ಆಟೋ ಚಾಲಕ |
| **ವಾಸಸ್ಥಳ** | : | ಹನುಮಾಪುರ, ಕುಣಿಗಲ್ ತಾಲ್ಲೂಕು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಆರೋಪಿ 4 ಮತ್ತು 7 ರವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆದರೆ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ. ಚಾ.ಸಾ.1 ನನ್ನ ಅಣ್ಣ. ಚಾ.ಸಾ.2 ನನ್ನ ತಮ್ಮ. ಚಾ.ಸಾ.4 ನನ್ನ ಅಣ್ಣ. ಚಾ.ಸಾ.5 ನನ್ನ ಪತ್ನಿ. ಚಾ.ಸಾ.6 , ಚಾ.ಸಾ.4 ರವರ ಪತ್ನಿ.

2. ನಮ್ಮ ಮನೆಗೂ ಆರೋಪಿತರ ಮನೆಗೂ 100 ಮೀಟರ್ ಅಂತರ ಇದೆ. ಆರೋಪಿ ಗುಲಾಬ್ ಜಾನ್ ರವರ ಮುಂದೆ ಊರಿಗೆ ಸೇರಿದ ನೀರಿನ ವಾಟರ್ ಟ್ಯಾಂಕ್ ಇದೆ. ಅದು ಊರಿನ ಎಲ್ಲಾ ಜನರಿಗೆ ಸೇರಿರುತ್ತದೆ. ಆರೋಪಿ ಗುಲಾಬ್ ಜಾನ್ ಟ್ಯಾಂಕಿನಲ್ಲಿದ್ದ ನೀರನ್ನು ಗಿಡಗಳಿಗೆ, ಮರಗಳಿಗೆ ಹಾಗೂ ವ್ಯಯ ಮಾಡುತ್ತಿದ್ದರು. ಆದಕ್ಕೆ ಚಾ.ಸಾ.5 ಹುರ್ಮತ್ ಬಾನು ಪ್ರಶ್ನೆ ಮಾಡಿದ್ದು, ಗುಲಾಬ್ ಜಾನ್ ನೀರಿನ ಟ್ಯಾಂಕು ನಮಗೆ ಸೇರಿರುತ್ತದೆ, ಟ್ಯಾಂಕ್ ನಮ್ಮ ಮನೆ ಇರುತ್ತದೆ ಎಂದು ಬೈದಿರುತ್ತಾರೆ. ಸದರಿ ಗಲಾಟೆ

ದಿ.04.01.2022 ರಂದು ಸಂಜೆ 04.30 ಗಂಟೆಗೆ ನಡೆದಿರುತ್ತದೆ. ಆಗ ಸದರಿ ಗಲಾಟೆ ವಿಚಾರದ ಬಗ್ಗೆ ನಾನು ಚಾ.ಸಾ.1 ರವರಿಗೆ ಕರೆ ಮಾಡಿ ಸದರಿ ವಿಚಾರವನ್ನು ತಿಳಿಸಿರುತ್ತೇನೆ. ಆಗ ನಾನು ಯಾವುದೇ ಗಲಾಟೆ ಮಾಡಿಕೊಳ್ಳಬೇಡಿ, ನಾವು ಬಂದು ಈ ಬಗ್ಗೆ ಮಾತನಾಡಿ ಬಗೆಹರಿಸುತ್ತೇವೆ ಎಂದು ಹೇಳಿರುತ್ತಾರೆ. ಆಗ ಚಾ.ಸಾ.1 ರವರ ಜೊತೆ ಚಾ.ಸಾ.2 ಮತ್ತು 7 ರವರು ಬಂದಿರುತ್ತಾರೆ. ನಂತರ ಅವರ ಅದೇ ದಿನ ರಾತ್ರಿ 08.45 ಗಂಟೆಗೆ ನಾನು, ಚಾ.ಸಾ.1, ಚಾ.ಸಾ.2, ಚಾ.ಸಾ.4, ಚಾ.ಸಾ.5, ಚಾ.ಸಾ.6 ಮತ್ತು ಚಾ.ಸಾ.7 ರವರು ಆರೋಪಿಗಳ ಮನೆಯ ಮುಂದೆ ಹೋಗಿ ನೀರನ್ನು ಏಕೆ ವ್ಯಯ ಮಾಡುತ್ತಿದ್ದೀರಿ, ಬೇಸಿಗೆ ಕಾಲ ನೀರು ಸಿಗುತ್ತಿಲ್ಲ ಎಂದು ಹೇಳಿದರು. ಆಗ ಗುಲಾಬ್ ಜಾನ್ ರವರು ಟ್ಯಾಂಕ್ ನಮ್ಮ ಮನೆಗೆ ಸೇರಿದ್ದು ನಾವು ಏನು ಬೇಕಾದರೂ ಮಾಡಿಕೊಳ್ಳುತ್ತೇವೆ ಎಂದು ನಮಗೆ ಬೈದರು. ಆಗ ಅಸ್ಲಾಂಖಾನ್, ಮನ್ಸೂರ್ ಖಾನ್, ನವೀ ಖಾನ್ ರವರು ನಮ್ಮನ್ನು ಬೈದಿರುತ್ತಾರೆ. ಆಗ ಸ್ಥಳಕ್ಕೆ ಒಂದು ಕಾರು ಬಂತು. ಸದರಿ ಕಾರಿನ ನಂಬರ್ ಕೆಎ.04 ಎಂಎ 3359 ಆಗಿರುತ್ತದೆ., ಕಾರು ಒಳಗೆ 5 ರಿಂದ 6 ಜನರು ಇದ್ದರು. ಅವರುಗಳೆಂದರೆ ಮೆಹಬೂಬ್ ಖಾನ್, ಸಲ್ಮಾನ್ ಖಾನ್, ಸೈಫ್ ಆಲೀ ಖಾನ್, ಅರ್ಬಾಸ್ ಖಾನ್, ತರ್ವೇಜ್ ಖಾನ್, ಹಪೀಜ್ ಖಾನ್ ಕಾರು ನಲ್ಲಿ ಬಂದು ಬೈದು ಜೀವ ಬೆದರಿಕೆ ಹಾಕಿದರು. 1 ನೇ ಆರೋಪಿ ಕೈಯಲ್ಲಿ ಮಚ್ಚು ಇತ್ತು. 1 ನೇ ಅರೋಪಿ ಮೆಹಬೂಬ್ ಖಾನ್ ಅಮ್ಜದ್ ಖಾನ್ ತಲೆ ಮೇಲೆ ಮಚ್ಚಿನಲ್ಲಿ ಹೊಡೆದರು. ಆಗ ಅವರಿಗೆ ರಕ್ತ ಗಾಯವಾಯಿತು. ನನಗೆ ಸಲ್ಮನ್ ಖಾನ್ ಮತ್ತು ಹಫೀಜ್ ಖಾನ್ ರವರು ಕೆಳಗೆ ಕೆಡವಿ ಚೆನ್ನಾಗಿ ಹೊಡೆದಿರುತ್ತಾರೆ. ನನ್ನ ತಲೆಗೆ ಮತ್ತು ಇತರ ಕಡೆಗೆ ಪೈಪಿನಿಂದ ರಾಡಿನಿಂದ ಹೊಡೆದಿರುತ್ತಾರೆ. ನನ್ನ ಅಣ್ಣನಾದ ರಿಯಾಜ್ ಖಾನ್ ರವರಿಗೆ ಆರೋಪಿ ಸಲ್ಮಾನ್ ಖಾನ್ ಮತ್ತು ಅಸ್ಲಾಂಖಾನ್ ರವರು ಪೈಪಿನಿಂದ ಹೊಡೆದರು ಅದರಿಂದ ಅವರಿಗೆ ರಕ್ತಗಾಯವಾಯಿತು. ಚಾ.ಸಾ.5 ಮತ್ತು 6 ಆರೋಪಿ ಗುಲಾಬ್ ಜಾನ್ ಅವರ ಕೂದಲುಗಳನ್ನು ಹಿಡಿದು ಚೆನ್ನಾಗಿ ಹೂಡೆದರು ಮತ್ತು ನನ್ನ ಹೆಂಡತಿ ಚಾ.ಸಾ.5 ರವರಿಗೆ ಗುಲಾಬ್ ಜಾಬ್ ಬಲಗೈ ಗೆ ತನ್ನ ಹಲ್ಲಿನಿಂದ ಕಚ್ಚಿರುತ್ತಾಳೆ. ಗಾಯಗೊಂಡಿದ್ದ ನಮ್ಮೆಲ್ಲರನ್ನು ಇಲಿಯಾಜ್, ಅಫ್ರೋಜ್ ಖಾನ್, ನಿಸಾರ್ ಖಾನ್ ಯಾವುದೋ ಆಟೋದಲ್ಲಿ ಕುಣಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಹೆಚ್ಚಿನ ಗಾಯಗಳಾಗಿದ್ದ ಅಮ್ಮದ್ ಖಾನ್, ರಿಯಾಜ್ ಖಾನ್ ಮತ್ತು ನನ್ನನ್ನು ಹೆಚ್ಚಿನ

ಚಿಕಿತ್ಸೆ ಬಗ್ಗೆ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಪುನಃ ನನ್ನನ್ನು ತುಮಕೂರಿನ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಬಂದರು. ಕರೋನ ಇದ್ದುದರಿಂದ ಊರಿನಲ್ಲಿ ಚಿಕಿತ್ಸೆ ಮುಂದುವರೆಸಿ ಎಂದು ವೈದ್ಯರು ನನ್ನನ್ನು ಕಳುಹಿಸಿರುತ್ತಾರೆ. 3 ರಿಂದ 4 ದಿನ ನಾವು ಒಳರೋಗಿಯಾಗಿ ಚಿಕಿತ್ಸೆ ಪಡೆದು ವಾಪಸ್ಸಾಗಿರುತ್ತೇವೆ. ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರು ಸರ್ಕಾರಿ ಆಸ್ಪತೆಯಲ್ಲಿ ಇನ್ನು 3 ರಿಂದ 4 ದಿನಗಳ ಒಳರೋಗಿಯಾಗಿ ದಾಖಲಿಸಿಕೊಂಡಿದ್ದರು. ಆರೋಪಿ ಮೆಹಬೂಬ ಖಾನ್ ಗಲಾಟೆ ಮುಗಿದ ನಂತರ ನಿಮ್ಮನ್ನು ಈ ದಿನ ಬಿಟ್ಟಿದ್ದೇವೆ , ಮುಂದೊಂದು ದಿನ ನಿಮ್ಮನ್ನು ಸಾಯಿಸುತ್ತೇವೆ ಎಂದು ಜೀವ ಬೆದರಿಕೆ ಹಾಕಿ ಹೋಗಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮಚ್ಚು , ಪೈಪು, ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ. 1 ರಿಂದ 10 ಎಂದು ಗುರುತಿಸಲಾಗಿದೆ. ಗಲಾಟೆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರಿಂದ**

**ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಕಾಲವಾಕಾಶ ಕೋರಿದ್ದು ಮುಂದೂಡಲಾಯಿತು**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.